ಶರಾವತಿ ವಿದ್ಯುದಾಗಾರದ ವಿದ್ಯುತ್ ಘಟಕ ಸಾಮರ್ಥ್ಯವನ್ನು ಪೆಟ್ಟಿಸಲಾಗಿದೆ	1	14.4	14.4 ಮೆ.ವ್ಯಾಟ್
ಡೀಸಲ್ ವಿದ್ಯುತ್ ಘಟಕ(ಯಲಹಂಕಾ)	4	21.32	85.28 ಮೆ.ವ್ಯಾಟ್

ಮಂಡ್ಯ ವಿಭಾಗ ಮಂಡ್ಯ ಇಲ್ಲಿಗೆ ಅನುದಾನ ಬಿಡುಗಡೆಯಾಗದಿರುವ ಬಗ್ಗೆ

575 - ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ವಿಭಾಗ, ಮಂಡ್ಯಕ್ಕೆ ಅನುದಾನ (ಎಲ್‌ಒಸಿ) ಬಿಡುಗಡೆಯಾಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ಅನುದಾನ ಬಿಡುಗಡೆ ಮಾಡಲು ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆ?

ಇ) ಮಂಡ್ಯ ಜಿಲ್ಲೆಯಲ್ಲಿ ಎಷ್ಟು ಕಿ.ಮೀ. ರಸ್ತೆಯನ್ನು ಮೇಲ್ದರ್ಜೆಗೆ ವಿರಿಸಲಾಗಿದೆ ಯಾವುದೆ (ವಿಧಾನಸಭಾ ಕ್ಷೇತ್ರವಾರು ಸಂಪೂರ್ಣ ಪ್ರತ್ಯೇಕ ಮಾಹಿತಿ ನೀಡುವುದು)

ಶ್ರೀ ಕೆ.ಪಿಚ್. ರಂಗನಾಥ್ (ಲೋಕೋಪಯೋಗಿ ಸಚಿವರು): [illegible]

ಅ) ಸರ್ಕಾರದಿಂದ ಹಣ ಭರವಸೆ ಪತ್ರ ಬಿಡುಗಡೆಯಾದ ಪ್ರಮಾಣದಲ್ಲಿ ಧಾಮಾಷ ಮಂಡ್ಯ ವಿಭಾಗಕ್ಕೂ ಹಣ ಭರವಸೆ ಪತ್ರ ಬಿಡುಗಡೆ ಮಾಡಲಾಗುತ್ತಿದೆ. ಪ್ರಸಕ್ತ ಸಾಲಿನ ಫೆಬ್ರವರಿ 94ರವರೆವಿಗೆ 310.96 ಲಕ್ಷ ರೂ.ಗಳ ವೆಚ್ಚವನ್ನು ಮಾಡಲಾಗಿದೆ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ

ಇ) 426.90 ಕಿಮೀ

ಕ್ಷೇತ್ರ	ಕಿ.ಮೀ
1) ಕೆರಗೋಡು	50.00
2) ಮದ್ದೂರು	50.00
3) ಮಳವಳ್ಳಿ	48.70
4) ಕಿರುಗಾವಲ್	49.20
5) ನಾಗಮಂಗಲ	50.00
6) ಕೆ.ಆರ್. ಪೇಟೆ	50.00
7) ಶ್ರೀರಂಗಪಟ್ಟಣ	48.00
8) ಪಾಂಡವಪುರ	51.50
9) ಮಂಡ್ಯ	29.50

ಉಡುಪಿ ತಾಲ್ಲೂಕಿನಲ್ಲಿ ವಿದ್ಯುತ್ ಸೌಲಭ್ಯವನ್ನು ಕೆಲವು ಸ್ಥಳಗಳಿಗೆ ಕಲ್ಪಿಸುವ ಬಗ್ಗೆ

593 - ಶ್ರೀ ಪಿ. ಬಸವರಾಜ್ (ಬ್ರಹ್ಮಾವರ): ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ತಾಲ್ಲೂಕು ಹೆಬ್ರಿ ಗ್ರಾಮದಲ್ಲಿ ಸಂಪೂರ್ಣ ವಿರಳವಾಗಿ 41ನೇ ವಿರೂರು ಗ್ರಾಮದ (ಕಾವಾಡಿ, ನೇಮಟ್ಟು, ಅಂಬಿದೆ ಬ್ಯಾಗ್ಯಾರು) ಸ್ಥಳಗಳಲ್ಲಿ ಈವರೆಗೆ ವಿದ್ಯುತ್ ಸಂಪರ್ಕ ಕಲ್ಪಿಸದೇ ಇರುವುದು ನಿಜವೇ?

ಆ) ಹಾಗಿದ್ದಲ್ಲಿ ಸಾರ್ವಜನಿಕರ ಈ ಮೂಲಭೂತವಾದ ಅವಶ್ಯಕತೆಯನ್ನು ಇಲಾಖೆ ಕೂಡಲೇ ಪೂರೈಸುವುದೇ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು): ಅ) ಉಡುಪಿ ತಾಲ್ಲೂಕಿನ ಕೆಂಜೂರು ಮತ್ತು 41 ಶಿರೂರು ಗ್ರಾಮಗಳನ್ನು ಈಗಾಗಲೇ ವಿದ್ಯುದ್ದೀಕರಿಸಲಾಗಿದೆ. ಆದರೆ 41ನೇ ಶಿರೂರು ಗ್ರಾಮದ ಮಜರೆಗಳಾದ ಕಾವಾಡಿ, ನೇಮಟ್ಟು ಮತ್ತು ಅಂಬಡೆ ಬಾಗ್ಯಾರು ಈ ಸ್ಥಳಗಳಿಗೆ ಇದುವರೆಗೆ ವಿದ್ಯುತ್ ಸಂಪರ್ಕ ಒದಗಿಸಿಲ್ಲ.

ಆ) 1994-95ರ ಸಾಲಿನಲ್ಲಿ ಈ ಮಜರೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ವಿಷಯವನ್ನು ಗಮನಿಸಲಾಗುವುದು.

ಕೇಂದ್ರ ಸರ್ಕಾರದ ಯೋಜನೆ ಅನ್ವಯ ಎಸ್. ಡಬ್ಲ್ಯೂ ಎಂ.ಪಿ. ಸ್ಕೀಮ್ ಅಡಿಯಲ್ಲಿ ಅಂಜನಾಪುರ-ಅಂಬ್ಲಿಗೊಳ ಜಲಾಶಯದ ಅಭಿವೃದ್ಧಿಗೆ ಹಣ ಮಂಜೂರು ಮಾಡುವ ಬಗ್ಗೆ

448 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ): ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೇಂದ್ರ ಸರ್ಕಾರದ ಯೋಜನೆ ಅನ್ವಯ (1701 ಹೆಪ್ಪಲ್ಲಿ) ಎಸ್.ಡಬ್ಲ್ಯೂ.ಎಮ್.ಪಿ. ಯೋಜನೆ ಅಡಿಯಲ್ಲಿ ಅಂಜನಾಪುರ-ಅಂಬ್ಲಿಗೊಳ ಜಲಾಶಯದ ಅಭಿವೃದ್ಧಿಗೆ ಹಣ ಮಂಜೂರಾಗಿದೆಯೇ?

ಆ) ಈ ಯೋಜನೆ ಅನ್ವಯ ಈ ಎರಡು ಜಲಾಶಯದ ಅಡಿಯಲ್ಲಿ ಈವರೆಗೆ ಆಗಿರುವ ಪ್ರಗತಿ ಎಷ್ಟು?

ಇ) ಈವರೆಗೆ ಪಾವತಿ ಮಾಡಿರುವ ಹಣವೆಷ್ಟು?

ಈ) ಶಿಕಾರಿಪುರ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಇಲಾಖೆ ವತಿಯಿಂದ 2702 ಹೆಪ್ಪ ಕೆಳಗೆ ಕೆರೆ ಕಾಮಗಾರಿ ಕೆಲಸ ನಡೆದಿದ್ದು ಅದೇ ರೀತಿ 2701 ಹೆಪ್ಪ ಕೆಳಗೆ ಕಾಮಗಾರಿ ಕೆಲಸಗಳಾಗಿದ್ದು, ಈ ಬಗ್ಗೆ ಹಣ ಬಿಡುಗಡೆ ಮಾಡದಿರಲು ಕಾರಣವೇನು?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):

ಅ) ಮಂಜೂರಾಗಿದೆ

ಆ)

ಅಂಜನಾಪುರ	ಅಂಬ್ಲಿಗೊಳ
ರೂ. 8.24 ಲಕ್ಷಗಳಷ್ಟು ಪ್ರಗತಿಯಾಗಿರುತ್ತದೆ	ರೂ. 8.76 ಲಕ್ಷ ಗಳಷ್ಟು ಪ್ರಗತಿಯಾಗಿರುತ್ತದೆ.

ಇ) ಅಂಜನಾಪುರ - ರೂ. 7.00 ಲಕ್ಷಗಳು
ಅಂಬ್ಲಿಗೊಳ - ರೂ. 8.76 ಲಕ್ಷಗಳು

ಈ) ಹಣವನ್ನು ಕಾಲಕಾಲಕ್ಕೆ ಸರಿಯಾಗಿ ಬಿಡುಗಡೆ ಮಾಡಲಾಗಿದೆ.

ಸಾಗರ ಸೊರಬ, ಶಿಕಾರಿಪುರ 110 ಕೆ.ವಿ. ಸಬ್ ಸ್ಟೇಷನ್ ಮಂಜೂರಾತಿ ಬಗ್ಗೆ

445 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ): ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಾಗರ - ಸೊರಬ - ಶಿಕಾರಿಪುರ 110 ಕೆ.ವಿ. ಸಬ್ ಸ್ಟೇಷನ್